ಇವರಿಗೆ,

**ಸಂಪಾದಕರು/ವರದಿಗಾರರು**

____________________

ಗುಲಬರ್ಗಾ

**ಪತ್ರಿಕಾ ಪ್ರಕಟಣೆ**

**ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಮ್** ಮತ್ತುಇನ್ಫೋಸಿಸ್ **ಫೌಂಡೇಷನ್** ವತಿಯಿಂದ ಬಯಲು ಶೌಚಮುಕ್ತ ಗ್ರಾಮಗಳೆಡೆಗೆ ಒಂದು ದಿಟ್ಟ ಹೆಜ್ಜೆ ಎಂಬ ಘೋಷವಾಕ್ಯದೊಂದಿಗೆ**"ಪರಿಶುದ್ಧಯೋಜನೆ"**ಆರಂಭವಾಗಿದೆ. ಈಗಾಗಲೇ ಪರಿಶುದ್ಧಯೋಜನೆಆರಂಭವಾಗಿ ಸುಮಾರು 6 ತಿಂಗಳುಗಳಾಗಿದ್ದು, ಸುಮಾರು 150 ಹಳ್ಳಿಗಳಲ್ಲಿ ಅರಿವು ಮೂಡಿಸಲಾಗಿದ್ದು, ಇದರಲ್ಲಿ 30 ಹಳ್ಳಿಗಳು ಮುಂದೆ ಬಂದು ಶೌಚಾಲಯ ನಿರ್ಮಿಸಿಕೊಳ್ಳುತ್ತಿದ್ದಾರೆ. ಈ ಹಳ್ಳಿಗಳ ಸುಮಾರು 1000 ಶೌಚಾಲಯ ನಿರ್ಮಾಣಕ್ಕಾಗಿಅರ್ಜಿತುಂಬಿರುತ್ತಾರೆ.ಅದರಲ್ಲಿ ಈಗಾಗಲೇ ಸುಮಾರು 400 ಶೌಚಾಲಯಗಳು ನಿರ್ಮಾಣವಾಗಿ ಹಸ್ತಾಂತರಿಸಲಾಗಿದೆ.391 ಶೌಚಾಲಯ ಕಟ್ಟಡಗಳು ಪ್ರಗತಿಯಲ್ಲಿವೆ.

ಶೌಚಾಲಯದಅರಿವು ಮೂಡಿಸಲು ಇನ್ಫೋಸಿಸ್ ಸಂಸ್ಥೆಯ 20 ಇಂಜಿನಿಯರಗಳು ದಿನಾಂಕ : 12–05–2012ರಂದು ಗುಲಬರ್ಗಾದ ಆಳಂದ ತಾಲೂಕಿನಗುಂಜ್ ಬಬಲಾದ, ಶುಕ್ರವಾಡಿ, ತಡಕಲ್ ಗ್ರಾಮಗಳಲ್ಲಿ ಮನೆ–ಮನೆಗೂ ಹೋಗಿ ಶೌಚಾಲಯಉಪಯುಕ್ತತೆ ಬಗ್ಗೆ ಅರಿವು ಮೂಡಿಸಿದರು.

ಪರಿಶುದ್ಧಯೋಜನೆತಂಡದೊಡನೆಜಿಲ್ಲಾ ಪಂಚಾಯತ ಸದಸ್ಯರಾದ ಹರ್ಷಾನಂದಗುತ್ತೇದಾರ, ತಡಕಲ್‌ಗ್ರಾಮ ಪಂಚಾಯತಅಧ್ಯಕ್ಷರು ಮತ್ತು ಸದಸ್ಯರು ಭಾಗವಹಿಸಿದ್ದರು.ಅವರುಕೂಡತಡಕಲ್ ಮತ್ತು ಶುಕ್ರವಾಡಿ ಗ್ರಾಮಗಳ ಮನೆ–ಮನೆಗೂ ಬಂದುಜನರಲ್ಲಿ ಶೌಚಾಲಯಅರಿವು ಮತ್ತು ನಿರ್ಮಾಣ ಮಹತ್ವವನ್ನು ವಿವರಿಸುವುದರಜೊತೆಗೆಜನರು ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು ವಿನಂತಿಸಿದರು.

ಈ ಕಾರ್ಯಕ್ರಮದಿಂದ ಶುಕ್ರವಾಡಿಗ್ರಾಮದಲ್ಲಿಗ್ರಾಮ ಪಂಚಾಯತಅಧ್ಯಕ್ಷರಾದಶ್ರೀ ಬಾಬುರಾವ ಪಾಟೀಲರವರು 100ಕ್ಕೆ 100 ಪ್ರತಿಶತ ಶೌಚಾಲಯ ನಿರ್ಮಿಸಿಕೊಳ್ಳುವುದಾಗಿ ಭರವಸೆ ನೀಡಿದರು.

ಈ ಗ್ರಾಮೀಣಜನರಲ್ಲಿಅರಿವು ಮೂಡಿಸುವಕಾರ್ಯಕ್ರಮದಲ್ಲಿ ಇನ್ಫೋಸಿಸ್ ಸಂಸ್ಥೆಯ ಮಹೇಶ, ರೀತೇಶ, ವರುಣ, ಭಾಗ್ಯಶ್ರೀ, ಮುಂತಾದವರು ಮತ್ತು ಪರಿಶುದ್ಧಯೋಜನೆಯಶ್ರೀನಿವಾಸ ದೇಶಮುಖ,ಶಿವಕುಮಾರ ದೇಸಾಯಿ, ಮಹೇಶ ಬಿರಾದಾರ, ಶಿವಕೂಮಾರ ಸ್ವಾಮಿ, ಸತೀಶಕುಮಾರ, ಅರುಣ ಬಿರಾದಾರ ಮುಂತಾದವರು ಭಾಗವಹಿಸಿದ್ದರು.

**ಶ್ರೀನಿವಾಸ ದೇಶಮುಖ**
ವ್ಯವಸ್ಥಾಪಕರು
"ಪರಿಶುದ್ಧಯೋಜನೆ"
ಮೊ : 94835–00810